ಬೇಕು. ಒಟ್ಟು ಎರಡು ಬಕೀಟು ನೀರು ಆಗಬೇಕು. ನಿಮ್ಮ ಕೈಯಿಂದ ಎರಡು ಬಕೀಟು ನೀರು ಅಲ್ಲ, ಎರಡು ಗ್ಲಾಸ್ ನೀರು ಕೊಡುವುದಕ್ಕಾಗುವುದಿಲ್ಲ. ಒಂದು ಊರಿನಲ್ಲಿರತಕ್ಕಂಥ ಜನರು ಎಲ್ಲರೂ ಈ ನಿರ್ಮಲ ಕರ್ನಾಟಕ ಯೋಜನೆ ತಂದರೆ ನಮ್ಮ ಕರ್ನಾಟಕದ ಏಕೀಕರಣ, ನಮ್ಮ ಕರ್ನಾಟಕದವರ ಇತಿಹಾಸ, ನಮ್ಮ ಕರ್ನಾಟಕದ ಹೆಸರು, ಆ ಕರ್ನಾಟಕದ ವ್ಯಾಖ್ಯಾನ ಏನು ಬಂದಿವೆ, ಅದನ್ನು ಶೌಚಾಲಯಕ್ಕೆ ತಂದರಲ್ಲ ನಮ್ಮ ಹಣೆಬರಹದ ಗತಿ ಏನು? ಮಾನ್ಯ ಮಂತ್ರಿಗಳು ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಿದಂಥವರು, ಹೆಸರು ಬಹಳ ಚೆನ್ನಾಗಿ ಇದೆ ಎಂದು ಇಟ್ಟು ಬಿಟ್ಟಿರೆ ಅದು ಆಗುವುದಿಲ್ಲ. ನೀವು ಒಳಚರಂಡಿ ಮತ್ತು ನೀರಿನ ವ್ಯವಸ್ಥೆ ಮಾಡದೆ ಇದು ಸಾಧ್ಯವಿಲ್ಲ. ಈ ರಾಜ್ಯದ, ದೇಶದ ಮಹಿಳೆಯರು ನಿರ್ಮಲ ಕರ್ನಾಟಕ ಯೋಜನೆ ಅಲ್ಲ ಯಾವ ಕರ್ನಾಟಕ ಯೋಜನೆ ತಂದರು, ಅವರು ಆ ಬೇಲಿ ಪಕ್ಕದಲ್ಲಿ ಕೂಡತಕ್ಕಂಥದ್ದು ತಪ್ಪುವುದಿಲ್ಲ. ಆ ಹೆಣ್ಣುಮಕ್ಕಳ ಸ್ವಾತಂತ್ರ್ಯವನ್ನು ನೀವು ಅಪಹರಣ ಮಾಡಿರುತ್ತೀರಿ. ನೀವು ಅವರಿಗೆ ಸರಿಯಾದಂಥ ಶೌಚಾಲಯವನ್ನು ಕೊಡುತ್ತಾ ಇಲ್ಲ. ನಾನು ನೇರವಾಗಿ ತಮಗೆ ಹೇಳುತ್ತೇನೆ. ನೀವು ಅವರ ಶಾಪಕ್ಕೆ ಗುರಿ ಆಗಿದ್ದೀರಿ. ನಾನು ತಮ್ಮ ಮೇಲೆ ವಿಶ್ವಾಸ ಇಟ್ಟುಕೊಂಡು ನಾನು ಧರಣಿ ಮಾಡುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಧರಣಕ್ಕೆ ಬಾವಿಗೆ ಬಂದರು)

ಉಪಾಧ್ಯಕ್ಷರು: ಅವರು ಉತ್ತರವನ್ನು ಹೇಳುತ್ತಾರೆ. ಉತ್ತರವನ್ನು ಕೇಳದೆ ತಾವು ಧರಣಿ ಮಾಡಿದರೆ ಹೇಗೆ? ಅದು ಸರಿಯಾದದ್ದು ಅಲ್ಲ, ಅವರ ಉತ್ತರವನ್ನು ಕೇಳಿ. ನೀವು ನಿಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಎಂ.ಪಿ.ಪ್ರಕಾಶ್: ನಾನು ಏನು ಮಾಡಬೇಕು ಅದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿ.

ಶ್ರೀ ಹೆಚ್.ಡಿ.ಬಸವರಾಜು: ವಾಟಾಳ್‌ರವರು ಧರಣಿ ಮಾಡುತ್ತಿದ್ದಾರೆ ನಮಗೆ ಎರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ವಾಟಾಳ್ ನಾಗರಾಜ್‌ರವರು ಧರಣಿ ಮಾಡುತ್ತಿದ್ದಾರೆ ಅವರನ್ನು ಕರೆಸಿ ಅದು ಸರಿಯಾಗಿ ಇರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಕರ್ನಾಟಕದ ಅನೇಕ ಬಾವಿಗಳಲ್ಲಿ ನೀರು ಇರುವುದಿಲ್ಲ. ಅದರಂತೆ ತಾವು ಆ ನೀರು ಇಲ್ಲದ ಬಾವಿಯಲ್ಲಿ ಏಕೆ ಕುಳಿತುಕೊಂಡಿದ್ದೀರಿ ಬನ್ನಿ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಸರ್ಕಾರ ಇರಬೇಕು, ಸುಖವಾಗಿ ಸರ್ಕಾರ